**ಸಾಕ್ಷಿಯನ್ನು ದಿನಾಂಕ 07.01.2026 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಅಂದರೆ ಸರಿ. ಅಪಘಾತ ಹೇಗಾಯಿತು ಎಂಬ ಬಗ್ಗೆ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಅಪಘಾತ ಬೈಕ್ ಚಾಲಕನ ತಪ್ಪಿನಿಂದಲೂ ಆಗಿರುವುದಾಗಿ ಪೊಲೀಸರು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಅಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಪೊಲೀಸ್ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಅಂದರೆ ಸರಿ. ಟಾಟಾ ಏಸ ವಾಹನದಿಂದಲೇ ಅಪಘಾತವಾಗಿರುವುದಾಗಿ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ.

ಅಪಘಾತ ಕಾಲಕ್ಕೆ ನನ್ನ ಗಂಡ ಗೌಂಡಿ ಕೆಲಸ ಮಾಡುತ್ತಿದ್ದರು. ಯಾರ ಬಳಿ ಗೌಂಡಿ ಕೆಲಸಕ್ಕೆ ಹೋಗುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ಯಾರು ಕೆಲಸಕ್ಕೆ ಕರೆಯುತ್ತಾರೋ ಅಲ್ಲಿಗೆ ಹೋಗುತ್ತಾರೆಂದು ನುಡಿಯುತ್ತಾರೆ. ನನ್ನ ಗಂಡನಿಗೆ ಪ್ರತಿದಿನ ಕೆಲಸ ಇರುತ್ತಿರಲಿಲ್ಲ ಅಂದರೆ ಕೆಲಸ ಇದ್ದಾಗ ಹೋಗುತ್ತಿದ್ದರು. ನನ್ನ ಗಂಡ ತಿಂಗಳಿಗೆ ರೂ.20 ಸಾವಿರ ಆದಾಯ ಗಳಿಸುತ್ತಿದ್ದರು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಯಾವುದೇ ಕೆಲಸ ಮಾಡುತ್ತಿಲ್ಲ.

ನನಗೆ ಇಬ್ಬರು ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು ಇರುತ್ತಾಳೆ. 2 ನೇ ಅರ್ಜಿದಾರರ ಮದುವೆಯಾಗಿರುತ್ತದೆ ಅಂದರೆ ಸರಿ. 3 ನೇ ಅರ್ಜಿದಾರರು ಬಿ.ಕಾಂ ಓದುತ್ತಿದ್ದು, 4 ನೇ ಅರ್ಜಿದಾರರು ಪಿ.ಯು.ಸಿ ಓದುತ್ತಿದ್ದಾರೆ. ಈ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರಬಹುದು. ಆ ರೀತಿ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಅಂದರೆ ಸರಿ. 3 ಮತ್ತು 4 ನೇ ಅರ್ಜಿದಾರರು ವಯಸ್ಕರು ಅಂದರೆ ಸರಿ.

ನನ್ನ ಗಂಡನಿಗೆ ಒಬ್ಬ ಸಹೋದರ ಇರುತ್ತಾರೆ. ಅವರು ಬೇರೆ ವಾಸ ಮಾಡುತ್ತಾರ. 5 ನೇ ಅರ್ಜಿದಾರರು ನನ್ನ ಗಂಡನ ಸಹೋದರನ ಜೊತೆ ಇರುತ್ತಾರೆ ಅಂದರೆ ನಮ್ಮ ಜೊತೆ ಇರುತ್ತಾರೆ. ನಮ್ಮ ಕುಟುಂಬದ ಸದಸ್ಯರ ಬಗ್ಗೆ ತೋರಿಸಲು ಪಡಿತರ ಚೀಟಿಯನ್ನು ಹಾಜರುಪಡಿಸಬಹುದು ಅಂದರೆ ನಮಗೆ ಪಡಿತರ ಚೀಟಿ ಇರುವುದಿಲ್ಲ. ವಾರಸಾ ಪ್ರಮಾಣ ಪತ್ರ ಇರುವುದಿಲ್ಲ. ವಾರಸಾ ಪ್ರಮಾಣ ಪತ್ರ ಹಾಜರುಪಡಿಸಲು ತೊಂದರೆ ಇರುತ್ತದೆ.

ದಿಃ19-06-2022 ರಿಂದ 21-06-2022 ರ ವರೆಗೆ ನನ್ನ ಗಂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ಆ ರೀತಿ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಗಂಡನ ಅಂತಿಮ ಸಂಸ್ಕಾರಕ್ಕೆ ರೂ.50 ಸಾವಿರ ಖರ್ಚು ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ನನ್ನ ಗಂಡನಿಗೆ 55 ರಿಂದ 60 ವರ್ಷ ವಯಸ್ಸಾಗಿತ್ತು ಅಂದರೆ ಸರಿಯಲ್ಲ.

ಅಪಘಾತ ಕಾಲಕ್ಕೆ ಟಾಟಾ ಏಸ ವಾಹನದ ಚಾಲಕನಿಗೆ ಡಿ.ಎಲ್.ಇರಲಿಲ್ಲ ಅಂದರೆ ಸರಿಯಲ್ಲ. ಈ ಅರ್ಜಿಗೆ ಅನುಕೂಲವಾಗುವಂತಹ ದಾಖಲೆಗಳನ್ನು ಮಾತ್ರ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ. ಟಾಟಾ ಏಸ ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲದಿದ್ದು 2 ನೇ ಎದುರುದಾರರು ಪರಿಹಾರ ನೀಡಲು ಬಾದ್ಯಸ್ಥರಲ್ಲ ಅಂದರೆ ಸರಿಯಲ್ಲ. ನನಗೆ ಅಪಘಾತದ ಬಗ್ಗೆ ವೈಯಕ್ತಿಕವಾಗಿ ಏನೂ ಗೊತ್ತಿಲ್ಲದಿದ್ದರಿಂದ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಅಂದರೆ ಸರಿಯಲ್ಲ.

ಅಪಘಾತದ ಬಗ್ಗೆ ದೂರನ್ನು ನಮ್ಮ ಮಾವ ಕೊಟ್ಟಿರುತ್ತಾರೆ. ಪ್ರಕರಣಕ್ಕೆ ಅನುಕೂಲವಾಗುವಂತೆ ಖೊಟ್ಟಿ ದೂರನ್ನು ನನ್ನ ಮಾವ ನೀಡಿರುತ್ತಾರೆ ಅಂದರೆ ಸರಿಯಲ್ಲ. ಅಪಘಾತ ಬೈಕ್ ಚಾಲಕನ ತಪ್ಪಿನಿಂದ ಆಗಿರುತ್ತದೆ ಅಂದರೆ ಸರಿಯಲ್ಲ. ನಾನು ಮತ್ತು ಪಿ.ಡಬ್ಲ್ಯೂ.1 ರವರು ಒಂದೇ ಕುಟುಂಬದವರಾಗಿದ್ದು ಪರಿಹಾರ ಬರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದ**

ಅಪಘಾತ ಬೈಕ್ ಚಾಲಕನ ತಪ್ಪಿನಿಂದ ಆಗಿರುತ್ತದೆ ಅಂದರೆ ಸರಿಯಲ್ಲ. ಟಾಟಾ ಏಸ ವಾಹನದ ವಿಮೆ ಚಾಲ್ತಿಯಲ್ಲಿದ್ದುದ್ದರಿಂದ 1 ನೇ ಎದುರುದಾರರು ಪರಿಹಾರ ನೀಡಲು ಬಾದ್ಯಸ್ಥರಲ್ಲ ಅಂದರೆ ಸರಿಯಲ್ಲ. (ಉಳಿದಂತೆ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು 1 ನೇ ಎದುರುದಾರರ ಪರ ವಕೀಲರು ವಿನಂತಿಸಿರುತ್ತಾರೆ)

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

ಸಹಿ/-

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ

ಧಾರವಾಡ.